# ಆಹಾ ಸುದ್ದಿ!

★ ಸಸಿತೋಟ



ಸಿಡ್ನಿಯ ಈ ಚದುರೆ ಜೋಡಿ ಕುದುರೆಗಳ ಮೇಲೆ ದೊಂಬರಾಟ ಮಾಡುತ್ತಿದ್ದಾಳೆ. ಅಲ್ಲಿ ನಡೆದ ಕುದುರೆಗಳ ಮೇಲಿನ ಸಾಹಸ ಪ್ರದರ್ಶನದಲ್ಲಿ ಕಂಡ ಮೈನವಿರೇಳುವ ದೃಶ್ಯವಿದು. ಈಕೆಯ ಮುಂದೆ ಎರಡು ದೋಣಿಗಳ ಮೇಲೆ ಕಾಲಿಟ್ಟವರ ಕತೆ ಕೇವಲ ಕತೆ ಮಾತ್ರವೇ?

ವೆನುಜುವೆಲಾದಲ್ಲಿ ಹೊಸ ಅಧ್ಯಕ್ಷರು ಆಯ್ಕೆಗೊಂಡ ಹಿಂದೆಯೇ ಒಂದರ ಹಿಂದೆ ಒಂದು ವಸ್ತುಗಳು ಮಾರುಕಟ್ಟೆಯಿಂದ ಮಾಯವಾಗುತ್ತಿವೆಯಂತೆ. ಹಾಲು, ಬೆಣ್ಣೆ, ಕಾಫಿಪುಡಿ, ಜೋಳದ ಹಿಟ್ಟು... ಎಲ್ಲವೂ ಈಗಾಗಲೇ ಕಣ್ಮರೆಯಾಗಿದ್ದು, ಈಗ ಟಾಯ್ಲೆಟ್ ಪೇಪರ್ ಸರದಿ. ಮಾಸಿಕ 7 ಲಕ್ಷ ಟನ್ ಆಹಾರ, 125 ದಶಲಕ್ಷ ರೋಲ್ ಟಾಯ್ಲೆಟ್ ಪೇಪರ್ ಅವಶ್ಯಕತೆಯಿದ್ದು, ಈಗ ಒಟ್ಟೊಟ್ಟಿಗೆ ಆಮದಿನ ಪಟ್ಟಿಯಲ್ಲಿ ಸೇರಿವೆ. ಹಸಿವು ಮುಖ್ಯವೋ, ಹಸಿವು ತಣಿಸಿದ ನಂತರದ್ದು ಮುಖ್ಯವೋ? ಜನತೆಯ ಮುಂದೆ ವಿರೋಧ ಪಕ್ಷಗಳು ಯಾವ ಪ್ರಶ್ನೆ ಇಡುತ್ತಾರೋ!



ಮ್ಯಾಡ್ರಿಡ್‌ನ ತರಕಾರಿ ಮಾರುಕಟ್ಟೆಗೆ ಶತಮಾನದ ಸಂಭ್ರಮ. ಸಂಭ್ರಮಾಚರಣೆ ತರಕಾರಿಯ ಮೂಲಕವೇ ಆಗಬೇಕಲ್ಲವೆ? ವಿಯೆನ್ನಾ ತರಕಾರಿ ಸಂಗೀತ ಕೂಟದ ಈ ಸದಸ್ಯೆ ಮೂಲಂಗಿ, ಗಜ್ಜರಿ ಕೋಸಂಬರಿ ಹಂಚುವ ಬದಲು ಅವುಗಳನ್ನು ಊದಿ ಸಂಭ್ರಮಕ್ಕೆ ಇಂಬು ಕೊಟ್ಟೇಬಿಟ್ಟಳು.




ಚೀನಾದಲ್ಲಿ ಈ ಲೋಡರ್ 'ಗಂಗ್ನಮ್' ಶೈಲಿಯಲ್ಲಿ ಕುಣಿದು ಕುಪ್ಪಳಿಸುತ್ತಿದೆ. ಉಳ್ಳವರು ಪ್ರಚಾರಕ್ಕೆ ದ.ಕೊರಿಯಾದ 'ಗಂಗ್ನಮ್' ನೃತ್ಯದ ಸೃಷ್ಟಿಕರ್ತ ಪಿಎಸ್‌ವೈ ಗೆ ಕೋಟ್ಯಂತರ ಹಣ ಕೊಟ್ಟು ಕರೆಸಿದರೆ, ತಂತ್ರಗಾರಿಕೆ ಗೊತ್ತಿರುವ ಚೀನೀಯರು ಹಣ ಉಳಿಸಿದರು.

ಅಮೆರಿಕದಲ್ಲಿ ಅಂಚೆಯಣ್ಣಂದಿರು ಭಯ ಪಡುವುದು ಯಾವುದಕ್ಕೆ ಗೊತ್ತೇ? ಸಾಕಿದ ನಾಯಿಗಳಿಗೆ. ಕಳೆದ ವರ್ಷ ಅಲ್ಲಿ ನಾಯಿಗಳಿಂದ ಕಚ್ಚಿಸಿಕೊಂಡ ಅಂಚೆಯಣ್ಣಂದಿರ ಸಂಖ್ಯೆ 5879. ಇದೀಗ ಅಲ್ಲಿಯ ಅಂಚೆ ಇಲಾಖೆ ಸಂದೇಶವನ್ನು ಹೊರಡಿಸಿದೆ- ಎಲ್ಲಿಯವರೆಗೆ ನಾಯಿಗಳ ಭಯವೋ ಅಲ್ಲಿಯವರೆಗೆ ನಿಮ್ಮ ಪತ್ರಗಳು ಇಲಾಖೆಯಲ್ಲೇ ಸುರಕ್ಷಿತ ಎಂದು. ಪ್ರೇಯಸಿ/ಪ್ರಿಯತಮನ ಪತ್ರ ಬೇಕೆಂದವರು ಪ್ರೀತಿಪಾತ್ರ ನಾಯಿಯ ಸಂಗ ತೊರೆಯಬೇಕಾಗಿದೆ.

ಅಮೆರಿಕದ ಈ ಮಹಿಳೆ ತೋಳಿಗೆ ಹಗ್ಗ ಬಿಗಿಸಿಕೊಳ್ಳುವುದರ ಮೂಲಕ ಖುಷಿಯಿಂದ ಬೀಗುವಳಂತೆ. ಕಳೆದ 10 ವರ್ಷಗಳಿಂದ ಆ ದೇಶದ ಕ್ಯಾಲಿಫೋರ್ನಿಯಾದಲ್ಲಿ ವರ್ಷಕ್ಕೊಮ್ಮೆ ವಿಚಿತ್ರ ಪಾರ್ಟಿಯೊಂದು ನಡೆಯುತ್ತದೆ. ಅಲ್ಲಿ ಹಗ್ಗದಿಂದ ಬಿಗಿದುಕೊಂಡು, ಛಡಿಯೇಟು ಬಾರಿಸಿಕೊಂಡು ಖುಷಿಪಡುವವರ ದಂಡೇ ನೆರೆಯುತ್ತದೆ. ಹಲವರಿಗೆ ಶಿಕ್ಷೆಯ ಮೂಲ ಕೆಲವರಿಗೆ ಸ್ವರ್ಗದ ಬಾಗಿಲು!

